# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 216 (184)

ಸದಸ್ಯರ ಹೆಸರು : ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 12.08.2025

ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕರ್ನಾಟಕ ರಾಜ್ಯ ಸಾಬೂನು ಮತ್ತು ಮಾರ್ಜಕ ನಿಗಮ ನಿಯಮಿತದ ಮೈಸೂರು ಸ್ಯಾಂಡಲ್ ಸೋಪ್‌ನ ರಾಯಭಾರಿಯಾಗಿ ಇಲ್ಲಿಯವರೆಗೆ ಕಾರ್ಯನಿರ್ವಹಿಸಿರುವ ಸೆಲೆಬ್ರಿಟಿಗಳು ಯಾರು ಯಾರು; ಯಾವಾಗ; ಯಾವ ಅವಧಿಯವರೆಗೆ ಇವರುಗಳನ್ನು ನೇಮಿಸಿಕೊಳ್ಳಲಾಗಿದೆ; (ಮಾಹಿತಿ ಒದಗಿಸುವುದು)</td><td rowspan="2">ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು ತನ್ನ ಉತ್ಪನ್ನಗಳ ಪ್ರಚಾರಕ್ಕಾಗಿ ಈ ಕೆಳಕಂಡ ಸೆಲೆಬ್ರಿಟಿಗಳನ್ನು ಪ್ರಚಾರ ರಾಯಭಾರಿಯನ್ನಾಗಿ ನೇಮಿಸಿಕೊಂಡಿದ್ದು, ಅವರುಗಳಿಗೆ ಈ ಕೆಳಕಂಡಂತೆ ಸಂಭಾವನೆ ನೀಡಲಾಗಿದೆ.<br>
<table>
<tr><th>Sl. No.</th><th>Celebrity</th><th>Years</th><th>Cost</th></tr>
<tr><td>1.</td><td>Dipika Chikhlia</td><td>1992-93</td><td>Rs.25 Lakhs</td></tr>
<tr><td>2.</td><td>Dodda Narasiah Ganesh</td><td>2003-04</td><td>Rs.25 Lakhs</td></tr>
<tr><td>3.</td><td>Mahendra Singh Dhoni</td><td>2005-06</td><td>Rs.84 Lakhs</td></tr>
<tr><td>4.</td><td>Mugdha Veira Godse</td><td>2013-14</td><td>Rs.25 Lakhs</td></tr>
<tr><td>5.</td><td>Tamanna Bhatia</td><td>2025-27</td><td>Rs.6.20 Crores</td></tr>
</table></td></tr>
<tr><td>(ಆ)</td><td>ಈ ರಾಯಭಾರಿಗಳಿಗೆ ಸಂಸ್ಥೆ ಅಥವಾ ಸರ್ಕಾರದ ವತಿಯಿಂದ ನೀಡಲಾದ ಹಣ, ಭತ್ಯೆ ಇತರೆ ಸೌಲಭ್ಯಗಳು ಯಾವುವು; (ವಿವರಗಳ ಮಾಹಿತಿ ಒದಗಿಸುವುದು)</td></tr>
<tr><td>(ಇ)</td><td>ಇತ್ತೀಚೆಗೆ ನೇಮಕ ಮಾಡಲಾದ ಬಹು ಭಾಷಾ ನಟಿ ತಮನ್ನರವರನ್ನು ಆಯ್ಕೆ ಮಾಡುವ ಮೊದಲು ನಮ್ಮ ರಾಜ್ಯದ ಇತರ ಸೆಲೆಬ್ರಿಟಿಗಳನ್ನು ಆಯ್ಕೆ ಮಾಡದಿರಲು ಕಾರಣಗಳೇನು; (ಮಾಹಿತಿ ಒದಗಿಸುವುದು)</td><td>ಕೆ.ಎಸ್.ಡಿ.ಎಲ್. ಸಂಸ್ಥೆಯು 06 ಮಾರುಕಟ್ಟೆ ಶಾಖೆಗಳನ್ನು, ಬೆಂಗಳೂರು, ಚೆನ್ನೈ, ಹೈದ್ರಾಬಾದ್, ಕೋಲ್ಕತ್ತಾ, ಮುಂಬೈ, ದೆಹಲಿ ನಗರಗಳಲ್ಲಿ ಹೊಂದಿದ್ದು, ಕರ್ನಾಟಕದಲ್ಲಿ ಮಾರಾಟ ವಹಿವಾಟು ಶೇಕಡ 18% - 324 ಕೋಟಿ ಮಾತ್ರ ಇದ್ದು, ಇತರೆ ರಾಜ್ಯಗಳಲ್ಲಿ ಶೇಕಡ 82% - 1500 ಕೋಟಿ ರಷ್ಟು ಮಾರಾಟ ವಹಿವಾಟು ಹೊಂದಿರುತ್ತದೆ. ಆದರೆ, ಬಾಂಬೆ, ಗುಜರಾತ್, ದೆಹಲಿ, ಹರಿಯಾಣ ಮತ್ತು ಈಶಾನ್ಯ ರಾಜ್ಯಗಳಲ್ಲಿ ವಹಿವಾಟು ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಸಂಸ್ಥೆಯ ಉತ್ಪನ್ನಗಳ ಮಾರುಕಟ್ಟೆಯನ್ನು ವಿಸ್ತರಿಸಲು ಹಾಗೂ ಉತ್ತರ ಭಾರತದಲ್ಲಿ ಸಂಸ್ಥೆಯ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿಸಲು ಸಾಮಾಜಿಕ ಜಾಲತಾಣಗಳಲ್ಲಿ ಅಧಿಕ ಜನಪ್ರಿಯತೆ ಮತ್ತು ಫೇಸ್‌ಬುಕ್ ನಲ್ಲಿ 28 ದಶಲಕ್ಷ, ಇನ್ ಸ್ಟಾಗ್ರಾಮ್ ನಲ್ಲಿ 28 ದಶಲಕ್ಷ, ಟ್ವಿಟರ್ ನಲ್ಲಿ 5.8 ದಶಲಕ್ಷ</td></tr>
</table>

| | | |
|---|---|---|
| | | Followers ಹೊಂದಿರುವಂತಹ ಅಂತರಾಷ್ಟ್ರೀಯ ಖ್ಯಾತಿಯ ಬಹು ಭಾಷಾನಟಿಯಾದ ಕು\|\| ತಮನ್ನಾ ಭಾಟಿಯಾ ಅವರನ್ನು ಸಂಸ್ಥೆಯು ಉತ್ಪನ್ನಗಳ ಪ್ರಚಾರ ರಾಯಭಾರಿಯನ್ನಾಗಿ ಆಯ್ಕೆ ಮಾಡಲಾಗಿದೆ. |
| (ಈ) | ಈ ಹೆಸರಾಂತ ಸಂಸ್ಥೆಗೆ ಉಚಿತವಾಗಿ ರಾಯಭಾರಿಯಾಗಿ ಬರಲು ಕನ್ನಡದ ಸೆಲೆಬ್ರಿಟಿಗಳನ್ನು ನೇಮಕ ಮಾಡಲು ಸರ್ಕಾರ ಏಕೆ ಮುಂದಾಗಿರುವುದಿಲ್ಲ; ಕನ್ನಡದ ಸೆಲೆಬ್ರಿಟಿಗಳು ಉಚಿತವಾಗಿ ಬಂದಿದ್ದಲ್ಲಿ ಸಂಸ್ಥೆಗೆ ಹೆಚ್ಚಿನ ಹಣ ಉಳಿತಾಯವಾಗುತ್ತಿರಲಿಲ್ಲವೆ? (ವಿವರಗಳನ್ನು ಒದಗಿಸುವುದು) | ಸಂಸ್ಥೆಯ ಉತ್ಪನ್ನಗಳ ಪ್ರಚಾರ ರಾಯಭಾರಿಯಾಗಿ ಉಚಿತವಾಗಿ ಸೇವೆಯನ್ನು ಒದಗಿಸಲು ಕನ್ನಡದ ಸೆಲೆಬ್ರಿಟಿಗಳು ಯಾರೂ ಮುಂದಾಗಿರುವುದಿಲ್ಲ. ಆದಾಗ್ಯೂ, ನಾಡಿನ ಸ್ಥಳೀಯವಾಗಿ ಹೆಸರಾಂತ ಚಲನಚಿತ್ರ ಕಲಾವಿದರನ್ನು ಉತ್ಪನ್ನಗಳ ಜಾಹಿರಾತು ಹಾಗೂ ಮುಂದಿನ ಪ್ರಚಾರಕ್ಕಾಗಿ ಈ ಸೆಲೆಬ್ರಿಟಿಗಳನ್ನು ಬಳಸಿಕೊಳ್ಳಲಾಗುತ್ತಿದೆ.<br><br>1. Ms. Nimika Ratnakar<br>2. Ms. Aradhana R<br>3. Ms. Sanya Iyer<br>4. Ms. Aishani Shetty |

ಸಂಖ್ಯೆ:ಸಿಐ 43 ಸಿಪಿಎಂ 2025 (ಇ)

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.